‘ಅವನು ತನ್ನ ಸಣ್ಣ ನೋಟ್ ಬುಕ್ಕಿನಲ್ಲಿ ಬರೆದುಕೊಂಡಿದ್ದು ನೋಡಲಿಲ್ಲವೇ?’

‘ನಿಜ ಗುರು! ಆದರೆ, ಅವನು ಆ ನೋಟ್‌ಬುಕ್ಕನ್ನು ಕಳಕೊಂಡಿದ್ದಾನೆ ಗುರೂ, ಪಾಪ! ಆ ನೋಟ್ ಬುಕ್ ಅಷ್ಟೇ ಅಲ್ಲ, ನಿನಗೆ ಟಿಕೆಟ್ ಕೊಟ್ಟ ಬುಕ್ಕನ್ನೂ ಕಳೆದುಕೊಂಡಿದ್ದಾನೆ, ಬೇಜವಾಬ್ದಾರಿ ಮನುಷ್ಯ!’

ಪೊಲೀಸನ ಜೇಬಿನಿಂದ ಎಗರಿಸಿದ ಎರಡೂ ಪುಸ್ತಕಗಳನ್ನು ಅವನು ಎತ್ತಿ ತೋರಿಸಿದ. ವ್ಹಾವ್! ಪೊಲೀಸನ ಬಳಿ ಈಗ ನಮ್ಮ ಬಗ್ಗೆ ಯಾವುದೇ ದಾಖಲೆಗಳಿರಲಿಲ್ಲ!

ನಾನು ಎಷ್ಟೊಂದು ಚಕಿತನಾದೆನೆಂದರೆ, ಮೈಮರೆತು, ಎದುರಿನಿಂದ ಬರುತ್ತಿದ್ದ ಹಾಲಿನ ಟ್ಯಾಂಕರಿಗೆ ಗುದ್ದುವವನಿದ್ದೆ.

‘ಗುರೂ, ನೀನು ಈ ಮುಖ್ಯ ರಸ್ತೆಯಿಂದ ಪಕ್ಕದ ರಸ್ತೆಗೆ ಕಾರು ತಿರುಗಿಸು. ಈ ನೋಟ್‌ಬುಕ್ಕುಗಳನ್ನು ಸುಟ್ಟುಹಾಕಿ ಬಿಡುವ.’

‘ನಿಜವಾಗಿಯೂ ನೀನೊಬ್ಬ ಅಪ್ರತಿಮ ಕಲಾವಿದ ಮಾರಾಯ. ಯಾವುದೇ ಸಂಶಯಗಳಿಲ್ಲ!’

‘ಥ್ಯಾಂಕ್ಸ್ ಗುರುವೇ. ಕೆಲವೊಮ್ಮೆ ಹೊಗಳಿಕೆ ನಿಜಕ್ಕೂ ಆರೋಗ್ಯಕ್ಕೆ ಒಳ್ಳೇದು ಅನಿಸುತ್ತೆ!’ ಫಳಫಳನೆ ಹೊಳೆಯುತ್ತಿದ್ದ ಅವನ ಇಲಿ ಕಣ್ಣುಗಳು ನಿಜಕ್ಕೂ ಮುದ್ದಾಗಿದ್ದವು.

## ರೋಆಲ್ಡ್ ಡಾಲ್

ನಾರ್ವೇಜಿಯನ್ ಮೂಲದ ಲೇಖಕ ರೋಆಲ್ಡ್ ಡಾಲ್ ಹುಟ್ಟಿದ್ದು ಇಂಗ್ಲೆಂಡಿನಲ್ಲಿ. ಎರಡನೇ ಜಾಗತಿಕ ಮಹಾಯುದ್ಧದಲ್ಲಿ ರಾಯಲ್ ಏರ್‌ಫೋರ್ಸ್‌ನಲ್ಲಿ ಪೈಲಟ್ ಆಗಿದ್ದ ಈ ಲೇಖಕ ಬಳಿಕ ಗುಪ್ತಚರ ವಿಭಾಗದಲ್ಲಿ ಕೆಲಸ ಮಾಡಿದರು. ಯುದ್ಧಾನುಭವದ ನಿರೂಪಣೆಗಳಿರುವ ಅವರ ಮೊದಲ ಕಥಾಸಂಕಲನ ಅಮೆರಿಕದಲ್ಲಿ ಪ್ರಕಟವಾಯಿತು. ಅವರಿಗೆ ಹೆಸರು ತಂದುಕೊಟ್ಟ ಕೃತಿ ‘My Uncle, Oswald’. ವಿಚಿತ್ರ ತಿರುವು, ವಿಲಕ್ಷಣ ಅಂತ್ಯಗಳಿರುವ ಸಣ್ಣ ಕತೆಗಳಿಗೆ ಅವರು ಪ್ರಸಿದ್ಧರಾಗಿದ್ದಾರೆ.

## ಜೆ.ವಿ. ಕಾರ್ಲೊ

ಅನುವಾದಕರು ಪ್ರಸ್ತುತ ಹಾಸನದಲ್ಲಿ ನೆಲೆಸಿದ್ದಾರೆ. ಕಾಲೇಜು ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ ಹಳ್ಳಿಗೆ ಸೇರಿದ್ದ ಅವರನ್ನು ಕಲಾವಿದ ಗೆಳೆಯರಾದ ಕೆ.ಟಿ. ಶಿವಪ್ರಸಾದರು ತಾವು ವಿನ್ಯಾಸ ಮಾಡಲು ಶುರುಮಾಡಿದ ಮನೆಗಳನ್ನು ಕಟ್ಟುವ ಕೆಲಸಕ್ಕೆ ಹಚ್ಚಿದರು. ಅದನ್ನೇ ಈಗಲೂ ಮುಂದುವರೆಸಿಕೊಂಡು ಬಂದಿದ್ದಾರೆ. ಈವರೆಗೆ ಕೆಲವು ಇಂಗ್ಲಿಷ್ ಸಣ್ಣ ಕತೆಗಳನ್ನು ಅನುವಾದಿಸಿದ್ದಾರೆ. ಸುಮಾರು 30 ಸಣ್ಣ ಕತೆಗಳು ಪತ್ರಿಕೆ, ಅಂತರ್ಜಾಲಗಳಲ್ಲಿ ಪ್ರಕಟಗೊಂಡಿವೆ. ಕನ್ನಡ ಮಾತ್ರವಲ್ಲದೆ ಕೊಂಕಣಿ ಭಾಷೆಯಲ್ಲಿ ಅವರ 80ಕ್ಕೂ ಹೆಚ್ಚು ಸಣ್ಣ ಕತೆಗಳ ಅನುವಾದಗಳು ಹಾಗೂ ಮೂರು ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ.